


# ಹೂವಿನ ರತ್ನಗಂಬಳಿ ಹಬ್ಬ

ಇಟಲಿಯಲ್ಲಿರುವ ಒಂದು ಸಣ್ಣ ಪಟ್ಟಣ ಅಂಬ್ರೈಸ್. ವರ್ಷಕ್ಕೊಮ್ಮೆ ಅಲ್ಲಿ ಬಣ್ಣಬಣ್ಣದ ಹೂಗಳಿಂದ ಸಿದ್ಧವಾಗುವ ಚಿತ್ರಕಲೆಯ ರಸದೌತಣ ನೀಡುವ ರತ್ನಗಂಬಳಿಗಳ ಉತ್ಸವವಿದೆ. ಸ್ಪೆಲ್ಲೋ ಎಂಬಲ್ಲಿ ಒಂದು ಮೈಲುದ್ದದ ರಸ್ತೆಯಲ್ಲಿ ಎರಡು ದಿನಗಳ ಕಾಲ ಸಾವಿರಾರು ಕಲಾವಿದರು ಜತೆಗೂಡಿ ಬಗೆ ಬಗೆಯ ಹೂಗಳನ್ನು ಬಳಸಿ ಅದರಲ್ಲೊಂದು ಕಲಾಕೃತಿಯನ್ನು ರಸ್ತೆಯ ಒಂದಿಂಚನ್ನೂ ಬಿಡದೆ ರೂಪಿಸುತ್ತಾರೆ. ಮೂರನೆಯ ದಿನ ಪ್ರದರ್ಶನಕ್ಕೆ ಸಿದ್ಧಗೊಳಿಸುತ್ತಾರೆ. ಇದಕ್ಕೆ ಡೊಮಿನಿ ಉತ್ಸವ ಎಂದು ಹೆಸರಿದೆ. ಹೀಗೆ ಬಿಡಿಸುವ ವೈವಿಧ್ಯಮಯವಾದ ಹೂಗಳ ಕಾರ್ಪೆಟ್‌ಗಳಲ್ಲಿ ಏಸುಕ್ರಿಸ್ತ, ಕನ್ಯಾ ಮರಿಯಮ್ಮ, ಸ್ವಸ್ತಿಕ ಚಿಹ್ನೆ, ಪಾರಿವಾಳ, ಧರ್ಮಗುರು ಪೋಪ್, ಪಾಲ್ ಫೀಸ್ಟ್, ಪೀಟರ್‌ರಂತಹ ಧಾರ್ಮಿಕ ವ್ಯಕ್ತಿಗಳು, ಐತಿಹಾಸಿಕ ಮಹಾಪುರುಷರು.. ಹೀಗೆ ಹಲವು ಬಗೆಯ ಸುಂದರ ಚಿತ್ರಗಳು ಹೂವುಗಳಿಂದಲೇ ನಿರ್ಮಾಣವಾಗುತ್ತವೆ.

ಹೀಗೊಂದು ಪುಟ್ಟ ಊರು ಹೂಗಳ ರತ್ನಗಂಬಳಿಗಳಿಂದ ಮನ ಸೆಳೆಯುತ್ತಿರುವುದು ಸುಮಾರು ಎರಡು ಶತಮಾನಗಳಿಂದ. 1962ರಲ್ಲಿ ಪ್ರವಾಸೋದ್ಯಮ ಇಲಾಖೆ ಈ ಹಬ್ಬವನ್ನು ಮುತುವರ್ಜಿಯಿಂದ ಆಚರಿಸತೊಡಗಿದೆ. ಸ್ಥಳೀಯ ಕಲಾವಿದರಲ್ಲದೆ ಪ್ರಾದೇಶಿಕ ಗಡಿ ದಾಟಿ ಅಂತಾರಾಷ್ಟ್ರೀಯ ಕಲಾವಿದರೂ ಇಲ್ಲಿಗೆ ಬರುತ್ತಿದ್ದಾರೆ. ಚಿತ್ರಗಳ ರಚನೆಗೆ ನೈಸರ್ಗಿಕವಾಗಿ ಕಾಡಿನಲ್ಲಿ ಬೆಳೆಯುವ ಕೆಂಪು, ನೀಲಿ, ಬಿಳಿ, ಹಳದಿ, ಗುಲಾಬಿ ಬಣ್ಣದ ಹೂಗಳು, ಹಸುರೆಲೆಗಳು, ಬೀಜಗಳನ್ನು ಮಾತ್ರ ಬಳಸುತ್ತಾರೆ.

■ ಪ. ರಾಮಕೃಷ್ಣ ಶಾಸ್ತ್ರಿ



